

# ಮಹಾದಾನಿ ಅಜೀಮ್ ಪ್ರೇಮ್‌ಜಿ

ಸೆಲೆಬ್ರಿಟಿಗಳೆಂದರೆ ಸದಾ ಸುದ್ದಿಗಾಗಿ ಹಪಹಪಿಸುವವರು ಎನ್ನುವ ಮಾತೊಂದಿದೆ. ಆದರೆ ಈ ಮಾತು ಎಲ್ಲರಿಗೂ ಅನ್ವಯಿಸುವುದಿಲ್ಲ. ವಿಪ್ರೊ ಕಂಪನಿಯ ಒಡೆಯ ಅಜೀಮ್ ಪ್ರೇಮ್‌ಜಿ ಅವರನ್ನೇ ಗಮನಿಸಿ. ಸುದ್ದಿಮನೆಯ ಮಿತ್ರರು ಅವರನ್ನು ಸುದ್ದಿಗಾಗಿ, ಸಂದರ್ಶನಕ್ಕಾಗಿ ಎಷ್ಟೇ ಬೆನ್ನು ಹತ್ತಿದರೂ ಅವರು ಸುದ್ದಿಗಾರರ ಕೈಗೆ ಸಿಗುವುದೇ ಇಲ್ಲ. ಅವರಿಗೆ ಪ್ರಚಾರದ ಬಯಕೆ ಎಳ್ಳಷ್ಟೂ ಇಲ್ಲ. ಹಾಗೆಂದು ಸುದ್ದಿಗಳಂತೂ ಅವರ ಬೆನ್ನುಬಿಡುವುದಿಲ್ಲ. ಅವರ ಕುರಿತ ಸುದ್ದಿಗಳಿಗೆ ಮಾಧ್ಯಮದಲ್ಲಿ ಯಾವ ಕೊರತೆಯೂ ಇಲ್ಲ. ಆದರೆ ಅವೆಲ್ಲವೂ ಒಳ್ಳೆಯ ಸುದ್ದಿಗಳೇ.

ಈಗ ಬಂದಿರುವ ಸುದ್ದಿ ಅಜೀಮ್ ಪ್ರೇಮ್‌ಜಿಯವರ ದಾನದ ಕುರಿತಾದದ್ದು. ಈ ವರ್ಷ ಅತ್ಯಧಿಕ ದಾನ ಮಾಡಿದವರ ಪಟ್ಟಿಯೊಂದನ್ನು ಎಡೆಲ್‌ಗಿವ್ ಹುನೂನ್ ಸಂಸ್ಥೆಯು ಪ್ರಕಟಿಸಿದೆ. ಆ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಇರುವವರು ಅಜೀಮ್ ಪ್ರೇಮ್‌ಜಿ. ಒಂದೇ ವರ್ಷದಲ್ಲಿ ಅಜೀಮ್ ಅವರು 7904 ಕೋಟಿ ರೂಪಾಯಿ ದಾನ ಮಾಡಿದ್ದಾರೆ. ಅಂದರೆ ಪ್ರತಿದಿನ ಅವರ ದಾನದ ಮೊತ್ತ ಸರಾಸರಿ 22 ಕೋಟಿ ರೂಪಾಯಿ!

ಮುಂಬೈಯಲ್ಲಿ ನೆಲೆಸಿದ, ಗುಜರಾತಿ ಮುಸ್ಲಿಂ ಕುಟುಂಬದಲ್ಲಿ ಜನಿಸಿದ ಅಜೀಮ್ ಹಾಶಿಮ್ ಪ್ರೇಮ್‌ಜಿ ಎಂಜಿನಿಯರ್, ಹೂಡಿಕೆದಾರ, ಉದ್ಯಮಿ, ದಾನಿ ಎಲ್ಲವೂ ಹೌದು. ಅಮೆರಿಕದ ಸ್ಟಾನ್‌ಫೋರ್ಡ್ ಯೂನಿವರ್ಸಿಟಿಯ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವೀಧರ. ಫೋರ್ಬ್ಸ್ ಪಟ್ಟಿಯ ಪ್ರಕಾರ ಈ ವರ್ಷ (2019–20) ಅವರ ನಿವ್ವಳ ಆಸ್ತಿಯ ಮೌಲ್ಯ 810 ಕೋಟಿ ಅಮೆರಿಕನ್ ಡಾಲರ್. 'ಭಾರತದ ಐಟಿ ಉದ್ಯಮದ ದೊರೆ' ಎಂದೇ ಹೆಸರು ಪಡೆದಿರುವ ಅವರು ತಮ್ಮ ತಂದೆ ಸ್ಥಾಪಿಸಿದ ವಿಪ್ರೊ ( ವೆಸ್ಟರ್ನ್ ಇಂಡಿಯಾ ಪಾಮ್ ರಿಫೈನ್ಡ್ ಆಯಿಲ್ ಲಿಮಿಟೆಡ್) ಎಂಬ ಅಡುಗೆ ಎಣ್ಣೆ ಉತ್ಪಾದಿಸುತ್ತಿದ್ದ ಕಂಪನಿಯನ್ನು ಬೃಹತ್ತಾಗಿ ಬೆಳೆಸಿದ್ದಾರೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರ ಮಾತ್ರವಲ್ಲ, ವೇಗವಾಗಿ ಖರ್ಚಾಗುವ ಗ್ರಾಹಕ ವಸ್ತುಗಳ ಉತ್ಪಾದನಾ ಕ್ಷೇತ್ರದಲ್ಲೂ ಅವರದ್ದು ಮುಂಚೂಣಿಯ ಉದ್ಯಮ. 2013ರಲ್ಲಿ ಐಟಿ ಹೊರತಾದ ಉದ್ಯಮಗಳನ್ನು ಪ್ರತ್ಯೇಕಗೊಳಿಸಿ ವಿಪ್ರೊ ಎಂಟರ್‌ಪ್ರೈಸಸ್ ಸ್ಥಾಪಿಸಿದ ಬಳಿಕ ಕಂಪನಿ ಇನ್ನಷ್ಟು ಅಗಾಧವಾಗಿ ಬೆಳೆಯಿತು.

ಜಗತ್ತಿನ ಮುಂಚೂಣಿಯ ಸಿರಿವಂತ ಉದ್ಯಮಿಗಳಾದ ವಾರೆನ್ ಬಫೆಟ್ ಮತ್ತು ಬಿಲ್ ಗೇಟ್ಸ್ ಜತೆಗೂಡಿ ಸ್ಥಾಪಿಸಿದ 'ದಿ ಗಿವಿಂಗ್ ಪ್ಲೆಡ್ಜ್'ಗೆ ಮೊದಲು ಸಹಿ ಮಾಡಿದ ಭಾರತೀಯ ಈತ. 2013ರಲ್ಲಿ ಅಜೀಮ್ 'ದಿ ಗಿವಿಂಗ್ ಪ್ಲೆಡ್ಜ್'ಗೆ ಸಹಿ ಹಾಕಿದರು. ತನ್ಮೂಲಕ ತನ್ನ ಆಸ್ತಿಯಲ್ಲಿ ಕನಿಷ್ಠ ಅರ್ಧದಷ್ಟನ್ನಾದರೂ ದಾನ ಮಾಡುವ ನಿರ್ಧಾರ ಕೈಗೊಂಡರು. ಅವರು ಲಾಭರಹಿತ ಸಂಸ್ಥೆಯಾಗಿ ಸ್ಥಾಪಿಸಿದ ಅಜೀಮ್ ಪ್ರೇಮ್‌ಜಿ ಫೌಂಡೇಷನ್‌ಗೆ, ಇದಕ್ಕಾಗಿಯೇ 2.2ಶತಕೋಟಿ ಡಾಲರ್ ನೀಡಿದರು. ಮುಖ್ಯವಾಗಿ ಭಾರತದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಂಪನ್ಮೂಲ ಹರಿಸುವುದು ಈ ಪ್ರತಿಷ್ಠಾನದ ಕಾಳಜಿ. ಈವರೆಗೆ ಅಜೀಮ್ ಪ್ರೇಮ್‌ಜಿಯವರು ನೀಡಿರುವ ದಾನದ ಮೊತ್ತ 21 ಶತಕೋಟಿ ಅಮೆರಿಕನ್ ಡಾಲರ್ ದಾಟಿದೆ!

ಶ್ರೀಮಂತಿಕೆಯಲ್ಲಿ ಇವತ್ತು ಏರಿರುವ ಎತ್ತರಕ್ಕೆ ಅಜೀಮ್ ಪ್ರೇಮ್‌ಜಿ ಒಮ್ಮೆಂದೊಮ್ಮೆಲೆ ಜಿಗಿದವರಲ್ಲ. 1966ರಲ್ಲಿ ತಂದೆ ಸತ್ತ ಸುದ್ದಿ ಸಿಕ್ಕಿದಾಕ್ಷಣ ಅವರು ಅಮೆರಿಕದಿಂದ ಮರಳಿ ಕುಟುಂಬದ ಉದ್ದಿಮೆಯ ನೇತೃತ್ವ ವಹಿಸಿದರು. 21ರ ಹರೆಯದಲ್ಲೇ ಅವರು ವಿಪ್ರೊ ಕಂಪನಿಯ ಚೇರ್‌ಮನ್ ಆದಾಗ ಕೆಲವು ಷೇರುದಾರರು ಬಂಡಾಯ ಹೂಡಿದ್ದೂ ನಡೆಯಿತು. ಧೃತಿಗೆಡದ ಅವರು ಕಂಪನಿಯ ಉತ್ಪನ್ನಗಳ ಪಟ್ಟಿಯನ್ನು ವಿಸ್ತರಿಸಿದರು. ಹೈಡ್ರಾಲಿಕ್ ಸಿಲಿಂಡರ್, ಸೋಪು, ಲೈಟಿಂಗ್ ಉಪಕರಣಗಳು ಮುಂತಾಗಿ ಅತ್ಯಧಿಕ ಗ್ರಾಹಕ ನೆಲೆಯುಳ್ಳ ವಸ್ತುಗಳ ಉತ್ಪಾದನೆ ಆರಂಭಿಸಿದರು. ಇನ್ನೊಂದೆಡೆ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಅವಕಾಶಗಳನ್ನೂ ಸರಿಯಾದ ಸಮಯಕ್ಕೆ ಬಳಸಿಕೊಂಡರು. 1980ರಲ್ಲಿ ಐಬಿಎಂ ಭಾರತದ ಮಾರುಕಟ್ಟೆಯಿಂದ ಹಿಂದೆ ಸರಿದಾಗ, ವಿಪ್ರೊ ಅಮೆರಿಕದ ಸೆಂಟಿನೆಲ್ ಕಂಪ್ಯೂಟರ್ಸ್ ಜೊತೆಗೂಡಿ ಮೈಕ್ರೊ ಕಂಪ್ಯೂಟರ್‌ಗಳನ್ನು ಉತ್ಪಾದಿಸಲು ತೊಡಗಿತು. ಜೊತೆಗೇ ಸಾಫ್ಟ್‌ವೇರ್ ಕ್ಷೇತ್ರಕ್ಕೂ ಕಾರ್ಯಾಚರಣೆ ವಿಸ್ತರಿಸಿತು. ಅಲ್ಲಿಂದೀಚೆಗೆ ಕಂಪನಿ ಇಟ್ಟದ್ದೆಲ್ಲ ಹನುಮಹೆಜ್ಜೆಯೇ ಆಯಿತು. ಈಗ ವಿಪ್ರೊ ಭಾರತದ ಅತಿದೊಡ್ಡ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಮುಂಚೂಣಿಯಲ್ಲಿದೆ.

ಕಳೆದ ವರ್ಷ ಜುಲೈನಲ್ಲಿ ಅಜೀಮ್ ಪ್ರೇಮ್‌ಜಿ ವಿಪ್ರೊ ಕಂಪನಿಯ ಆಡಳಿತ ಮಂಡಳಿಯ ಚೇರ್‌ಮನ್ ಹುದ್ದೆಯಿಂದ ನಿವೃತ್ತರಾದರು. ಮಗ ರಿಷಾದ್‌ಗೆ ಆ ಹೊಣೆ ಹೊರಿಸಿ ತಾವು ಅಧಿಕಾರೇತರ ನಿರ್ದೇಶಕರಾಗಿ ಉಳಿದುಕೊಂಡಿದ್ದಾರೆ. ಜಗತ್ತಿನ 100 ಪ್ರಭಾವಶಾಲಿ ವ್ಯಕ್ತಿಗಳ ಪಟ್ಟಿಯಲ್ಲಿ ಅವರ ಹೆಸರಿದೆ. 'ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ 30 ಉದ್ಯಮಿಗಳ ಪಟ್ಟಿ'ಯಲ್ಲೂ ಅವರ ಹೆಸರಿದೆ. ಈಗ ಭಾರತದ ಮಹಾದಾನಿಗಳ ಪಟ್ಟಿಯಲ್ಲಿ ಅವರು 'ನಂಬರ್ ಒನ್' ಆಗಿದ್ದಾರೆ. 75ರ ಇಳಿವಯಸ್ಸಿನಲ್ಲೂ ಆರೋಗ್ಯವಂತರಾಗಿ ಸರಳ, ಶಿಸ್ತುಬದ್ಧ ಜೀವನ ನಡೆಸುತ್ತಿರುವ ಅಜೀಮ್ ಪ್ರೇಮ್‌ಜಿ ಅವರ ಕುರಿತು ಮಗ ರಿಷಾದ್ ಪ್ರೇಮ್‌ಜಿ ಹೇಳಿರುವ ಮಾತು ಅಕ್ಷರಶಃ ಸತ್ಯ. 'ನನ್ನ ಅಪ್ಪ ಯಾವತ್ತೂ ತಮ್ಮ ಸಂಪತ್ತಿನ ಒಡೆಯರಂತೆ ನಡೆದುಕೊಳ್ಳಲಿಲ್ಲ, ಬದಲಾಗಿ ಸಂಪತ್ತಿನ ಧರ್ಮದರ್ಶಿಯಂತೆ ಬದುಕಿದರು'.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65